**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**MVC 60-25 PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ M M Y, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಿಪಿ.18 ಎಂದು ಗುರುತಿಸಲಾಯಿತು.

ವಿವೇಕಾನಂದ ಆಸ್ಪತ್ರೆಯಿಂದ ಹಾಜರಪಡಿಸಿದ ಮೆಡಿಕಲ್ ದಾಖ್ಲೆಗಳನ್ನು ಒಟ್ಟಾಗಿ ನಿಪಿ.19 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರ ಪರ ಶ್ರೀ ಬಿ ಎನ್ ಎಸ್, ವಕೀಲರಿಂದಃ**

-ವಿವೇಕಾನಂದ ಆಸ್ಪತ್ರೆಯಲ್ಲಿ ನಾನೇ ಗಾಯಾಳುವಿಗೆ ಚಿಕಿತ್ಸೆ ನೀಡಿದ್ದೇನೆ. ಗಾಯಾಳು ಕಿಮ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನೆನಪಿಲ್ಲ. ವಿವೇಕಾನಂದ ಆಸ್ಪತ್ರೆಯಲ್ಲಿ ಗಾಯಾಳು ದಿಃ 19.6.2024 ರಂದು ಸಮಯ 3.45 ನಿಮಿಷಕ್ಕೆ ದಾಖಲಾಗಿರುತ್ತಾರೆ. ಆ ದಿನ ಗಾಯಾಳುವನ್ನು ಒಳರೋಗಿಯಾಗಿ ದಾಖಲ್ ಮಾಡಿಕೊಂಡು ದಿಃ 20.6.2024 ರಂದು ಶ್ರಸ್ತಚಿಕಿತ್ಸೆಗೆ ಒಳಪಡಿಸಿದ್ದೇವೆ. ಈಗ ಸಾಕ್ಷಿಗೆ ಕಿಮ್ಸ ಆಸ್ಪತ್ರೆಯವರು ಹೊರಡಿಸಿದ ನಿಪಿ.4 ಗಾಯದ ಪ್ರಮಾಣ ಪತ್ರ ತೋರಿಸಲಾಗಿ ಅದರಲ್ಲಿ ಗಾಯಾಳು ದಿಃ 19.6.2024 ರಂದು ಬೆಃ 5.55 ನಿಮಿಷಕ್ಕೆ ದಾಖಲಾಗಿರುತ್ತಾರೆ. ನಿಪಿ.4 ರಲ್ಲಿ Left knee joint range of movement is restricted ಎಂದು ನಮೂದು ಮಾಡಲಾಗಿದೆ ಅಂದರೆ ಸರಿ. ವೈದ್ಯರ ಸಲಹೆಯನ್ನು ತಿರಸ್ಕಾರ ಮಾಡಿ ಗಾಯಾಳುವನ್ನು ಬಿಡುಗಡೆ ಮಾಡಿಸಿಕೊಂಡಿದ್ದಾರೆ ಅಂದರೆ ಸರಿ. ನಾನು ನೀಡಿದ ಚಿಕಿತ್ಸೆ ಕಿಮ್ಸ ಆಸ್ಪತ್ರೆಯಲ್ಲಿ ಲಭ್ಯವಿರುವ ಬಗ್ಗೆ ಗೊತ್ತಿಲ್ಲ. ಕಿಮ್ಸ ಆಸ್ಪತ್ರೆಯ ಸುಸಜ್ಜಿತ ಆಸ್ಪತ್ರೆ ಅಂದರೆ ಗೊತ್ತಿಲ್ಲ. ರೆಡಿಯಾಲಜಿ ವರದಿಯಲ್ಲಿ There is a evidence Of displaced fracture of upper end of the tibia ಎಂದು ನಮೂದು ಇದೆ. ರೆಡಿಯಾಲಜಿ ವರದಿ ಪ್ರಕಾರ Fracture of tibia ಅಂದರೆ ಸರಿ. ಶ್ರಸ್ತಚಿಕಿತ್ಸೆ ಮಾಡಿ ಪ್ಲೇಟ ಹಾಕಿದ್ದೇವೆ. ದಿಃ 4.11.2025 ರಲ್ಲಿ ಪ್ಲೇಟ ತೆಗೆದಿದ್ದೇವೆ. ಮೂಳೆ ಮುರಿತ ಕೂಡಿದ ನಂತರ ಪ್ಲೇಟ ತೆಗೆದಿದ್ದೇವೆ. ಪ್ಲೇಟ ತೆಗೆದ ನಂತರ ರೋಗಿಯನ್ನು ಬಿಡುಗಡೆ ಮಾಡಿದ್ದೇವೆ ಅಂದರೆ ಸರಿ. ಗಾಯಾಳು ಬಿಡುಗಡೆ ಮಾಡಿದ ನಂತರ ಅಪಘಾತ ಗಿಂತ ಮುಂಚಿನ ತರಹ ಇದ್ದಾನೆ ಅಂದರೆ ಸರಿಯಲ್ಲ.

**MVC 60-25** **PW : 2**

ಅಂಗನ್ಯೂನ್ಯತೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತವೆ ಅಂದರೆ ಸರಿಯಲ್ಲ. The Strength of muscles person to person differ. ಗಾಯಾಳು ಚೇರ ಮೇಲೆ ಕೂಡಬಹುದು. ಮೆಟ್ಟಿಲು ಹತ್ತಲು ಬರುವುದಿಲ್ಲವೆಂದು ಸುಳ್ಳು ವರದಿ ನೀಡಿದ್ದೇನೆ ಅಂದರೆ ಸರಿಯಲ್ಲ. ಭಾರತ ಸರಕಾರದ ಮಾರ್ಗಸೂಚನೆ ಮೇರೆಗೆ ನಾನು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿದ್ದೇನೆ. ನಾನು ಬಹಳ ಹಿಂದೆ ಕೆಸ್ಟಲರ ಅಂಗನ್ಯೂನ್ಯತೆಯ ನಿಯಮಗಳನ್ನು ಓದಿದ್ದೇನೆ. ಈಗ ನೆನಪಿಲ್ಲ. ಅಂಗನ್ಯೂನ್ಯತೆ ಒಟ್ಟಾರೆ ದೇಹಕ್ಕೆ ಶೇಕಡಾ 1/3 ರಷ್ಟು ಆಗುತ್ತದೆ ಅಂದರೆ ಹೆಚ್ಚಾಗುತ್ತದೆ ಎಂದು ಹೇಳುತ್ತಾರೆ. ಗಾಯಾಳುವಿಗೆ ಹೆಚ್ಚಿನ ಪರಿಹಾರ ಕೊಡಿಸಲು ಹೆಚ್ಚು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.